ಆ ಅವಸ್ಥೆಗೆ ದೂಡಿದವರು ಯಾರ್‍ಯಾರು? ಹುಡುಕುತ್ತ ಹೋದರೆ ಕುಡಿತವೊಂದೇ ಅಪರಾಧಿಯಲ್ಲ ಎಂದು ಗೊತ್ತಾಗುವುದು.

ಸ್ತ್ರೀಯರು ಸಂತೋಷಕೂಟದಲ್ಲಿ ಪಾನಸೇವನೆ ವಿರೋಧಿಸುವಷ್ಟು ಹಟಮಾರಿಗಳಲ್ಲ. ಆದರೆ ಪುರುಷ ಕುಡಿತ ಸಂಸಾರವನ್ನು ಉಧ್ವಸ್ಥಗೊಳಿಸುವಾಗ ಎದುರು ನಿಲ್ಲುವರು. ಈ ವಿಷಯದಲ್ಲಿ ಗಂಡಸರು ಸಿಕ್ಕಾಪಟ್ಟೆ ಅಸೂಕ್ಷ್ಮರು. ನಾನು ಅಭಿಮಾನಿಸುತ್ತಿದ್ದ ಒಬ್ಬ ಹಿರಿಯ ರಂಗನಟ ಒಬ್ಬರಿಗೆ ಕುಡಿಯಲು ಹೊತ್ತುಗೊತ್ತೇ ಇರಲಿಲ್ಲ. ನಾನು ಯಾತಕ್ಕೊ ಬೆಂಗಳೂರಲ್ಲಿದ್ದಾಗ ಮಹತ್ವದ ವಿಷಯದ ಮೇಲೆ ಚರ್ಚಿಸುವುದಿದೆ ಎಂದು ನನ್ನ ರೂಮಿಗೆ ಬಂದರು–ಮಿಸೈಲ್ ಆಕಾರದ ಸ್ಕಾಚ್‌ವಿಸ್ಕಿ ಬಾಟಲಿ ಸಮೇತ; ಬಳಲಿದ ಬೆರಳುಗಳಿಂದ ಕಷ್ಟಪಟ್ಟು ಬಿರಟೆ ತೆರೆದು ಒಬ್ಬರೇ ಕುಡಿಯುತ್ತ ಹರಟತೊಡಗಿದರು. 'ಮಹತ್ವದ' ವಿಷಯ ಚರ್ಚೆಗೆ ಬರಲೇಯಿಲ್ಲ. ನಾನು ತರಿಸಿಟ್ಟಿದ್ದ ಊಟದತ್ತ ಕಣ್ಣೆತ್ತಿಯೂ ಅವರು ನೋಡಲಿಲ್ಲ. ಅವರ ತುರಿಯಾವಸ್ಥೆ ಕಂಡು ನನ್ನ ಕಾಟಿನ ಮೇಲೆ ಮಲಗಿಸಿ, ನಾನು ನೆಲದಲ್ಲಿ ದಿಂಡುರುಳಿದೆ. ನಡುರಾತ್ರಿ ಗುಳುಗುಳು ಶಬ್ದ ಬರತೊಡಗಿತು. ಎಚ್ಚರಗೊಂಡು ಕತ್ತಲಲ್ಲೇ ಕಣ್ಣರಳಿಸಿ ನೋಡುತ್ತೇನೆ ಮಾನವಾಕೃತಿಯೊಂದು ಸೀಸೆಯಿಂದ ಕಚ್ಚಾವಿಸ್ಕಿಯನ್ನು ಹೊಯ್ದುಕೊಳ್ಳುತ್ತಿದೆ. ಪಾನವು ದುಗುಡಕ್ಕೊ ಸಂತಸಕ್ಕೊ ಸಮಾನಮನಸ್ಕರನ್ನು ಒಂದು ವೇದಿಕೆಗೆ ಕೂಡಿಸಬಲ್ಲ ರಸಕೊಂಡಿ. ಇಸಮು ಒಂಟಿಯಾಗಿ ಸೇವಿಸುತ್ತಿದ್ದರೆ ಗಾಡಿ ಹಳಿತಪ್ಪಿದೆಯೆಂದೇ ತಿಳಿಯಬೇಕು. ಒಂದು ದಿನ ಈ ನಟಸಾರ್ವಭೌಮನ ಕುಟುಕುಜೀವವು ಬಿದಿರದಬ್ಬೆಯಾಗಿದ್ದ ಶರೀರವನ್ನು ಬೀದಿಮೇಲೆ ವಿಸರ್ಜಿಸಿ ಇಹಲೋಕಕ್ಕೆ ವಿದಾಯ ಹೇಳಿತು. ಇದಾದರೂ ಕುಟುಂಬದವರಿಗೆ ಗೊತ್ತಾಗಿದ್ದು ವಾರ ಕಳೆದ ನಂತರ. ಕೆಲವರ ವ್ಯಸನಕ್ಕೆ ಭರಿಸಲಾಗದ ದುಃಖಾಘಾತ ಕಾರಣವಾಗಿರಬಹುದು. ಹಾಗೆಂದು ಎಲ್ಲರೂ ದೇವದಾಸರಾಗುವ ಅಗತ್ಯವೇನಿದೆ? ಕುಡಿತ ದುರ್ಬಲರಲ್ಲಿ ವ್ಯಸನವಾಗುತ್ತದೆಯೊ ವ್ಯಸನವೇ ದೌರ್ಬಲ್ಯಕ್ಕೆ ದೂಡುತ್ತದೆಯೊ–ನನಗಿನ್ನೂ ಬಗೆಹರಿದಿಲ್ಲ.

ನಾನು ಜನಪದ ಕತೆಗಳನ್ನು ನಮ್ಮ ತೋಟಕಾಯುತ್ತಿದ್ದ ಅಜ್ಜನಿಂದ ಸಂಗ್ರಹ ಮಾಡಿದ್ದು ನೆನಪಾಗುತ್ತಿದೆ. ಒಂದು ಕತೆಗೆ ಒಂದು ಬಾಟಲಿ ತಂದುಕೊಡಬೇಕು ಎಂಬುದು ಅವನ ಕರಾರಾಗಿತ್ತು. ಆ ಕತೆಗಳನ್ನು ಓದುವ ಓದುಗರು ನಾನು ಎಷ್ಟು ಬಾಟಲಿ ಸರಬರಾಯಿ ಮಾಡಿದ್ದೇನೆಂದು ಲೆಕ್ಕಹಾಕಲಿ. ತತ್ವಪದ ಗಾಯಕರ ಲೋಕದಲ್ಲಿ ಭಂಗಿ, ಮದಿರೆ ಸಾಮಾನ್ಯ. ತನ್ನ ಮಧುರಕಂಠಕ್ಕೆ ಹೆಸರಾದ ತತ್ವಪದ ಗಾಯಕನ ಹಾಡು ಕೇಳಲು ಕಷ್ಟಪಟ್ಟು ಹೋಗಿದ್ದೆ. ವಿಶ್ವವಿದ್ಯಾಲಯದವರು ಹುಡುಕಿ ಬಂದಿದ್ದಾರೆಂಬ ಸಂಭ್ರಮದಲ್ಲೊ ಅವರಿಗೇಕೆ ಸಹಕರಿಸಬೇಕೆಂಬ ಸಿಟ್ಟಲ್ಲೊ ಆತ ಪತಾಕೆಯೇರಿಸಿ ಬಂದವನು ನಮ್ಮ ಮುಂದೆ ಮರದ ಕೊರಡಿನಂತೆ ಮಲಗಿಬಿಟ್ಟ. ಎದ್ದಿದ್ದು ಬೆಳಕುಹರಿದ ಮೇಲೆಯೇ. ಆರೂಢಕ್ಷೇತ್ರದಲ್ಲಿ ಮದ್ಯಕ್ಕೆ ಅಲ್ಲಿ ಆನಂದವೆಂಬ ಹೆಸರಿದೆ. ಈ ಆನಂದವನ್ನು ತೀರ್ಥವಾಗಿ ಕೊಡುವ ಗದ್ದುಗೆಗಳೂ ಇವೆ. ಮದಿರೆಯ ಬಲವೊ ಪಾನಿಯ ನಿರ್ಬಲವೊ ಕಾಣೆ, ನಾನು ಭಾಗವಹಿಸಿದ್ದ ಒಂದು ಜಾತ್ರೆಯಲ್ಲಿ ಒಬ್ಬ ಸಿಸುಮಗ ಆನಂದ ಸೇವನೆ ಮಾಡಿದವನು, ಅಹೋರಾತ್ರಿ ನಿದ್ದೆಗೆ ಸಂದಿದ್ದನು.

ಆಧುನಿಕ ಸಮಾಜದಲ್ಲಿ ಪಾನಿಗಳಿಗೆ ದೊಡ್ಡ ಮರ್ಯಾದೆಯಿಲ್ಲ, ನಿಜ. ಆದರೆ ಮದ್ಯವು ಅನೇಕ ಆಚರಣೆ ಆರಾಧನೆಗಳ ಅವಿನಾ ಭಾಗವಾಗಿರುವುದನ್ನು ಮರೆವಂತಿಲ್ಲ. ಶರಣರ ವಚನದಲ್ಲಿ ಉಲ್ಲೇಖಗೊಂಡ 'ಹೆಂಡ'ತಿ ಕುಡಿಯುತ್ತಿರುವುದು ವ್ಯಸನಕ್ಕಾಗಿಯಲ್ಲ. ಶಾಕ್ತರ ಪಂಚ'ಮ'ಕಾರಗಳಲ್ಲಿ ಒಂದು 'ಮ'ಕಾರದ ಅರ್ಥವೇ ಮದ್ಯ; ಸೋಮವಾಜಪೇಯ